ದೂರವಾಣಿ : 080 - 22263479

ಬೆಂ.ಮ.ಪ್ರ.ಪ್ರಾ

# ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನಂ. 1, ಆಲಿ ಆಸ್ಕರ್ ರಸ್ತೆ, ಬೆಂಗಳೂರು – 560 052.

**ಸಂಖ್ಯೆ: STRRPA/TP/CC/31/2025-26** **ದಿನಾಂಕ: 13 .06.2025**

## "ಪ್ರಾರಂಭಿಕ ಪ್ರಮಾಣ ಪತ್ರ"

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರನ್ವಯ)**

**(ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ ನಿಯಮಗಳ 1965 ರ ನಿಯಮ 30 ನಮೂನೆ 3 ರನ್ವಯ)**

ವಿಷಯ: ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಮಾನಿದೊಡ್ಡಕೆರೆ ಗ್ರಾಮದ ಸ.ನಂ.129/9ರಲ್ಲಿ 0–27ಗುಂಟೆ ಮತ್ತು 130/1ರಲ್ಲಿ 01ಎಕರೆ–17ಗುಂಟೆ (0–05ಗುಂಟೆ 'ಎ' ಖರಾಬು ಸೇರಿ) ಒಟ್ಟು 02ಎಕರೆ–04ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ಅನುಮೋದನೆಯಾಗಿರುವ ವಸತಿ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಯ ಸ್ವತ್ತಿನ ಸಂಖ್ಯೆ:150300401000900610ರ 8009.37ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ತಳ+ನೆಲ+12 ಅಂತಸ್ತುಗಳು+ಟೆರಸ್ ಒಳಗೊಂಡಂತೆ ವಸತಿ ಉದ್ದೇಶದ ಒಟ್ಟು 166 ಘಟಕಗಳ ಕಟ್ಟಡವನ್ನು ನಿರ್ಮಿಸಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:

1. ಈ ಪ್ರಾಧಿಕಾರದಿಂದ ವಸತಿ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ ಆದೇಶ ಪತ್ರ ಸಂಖ್ಯೆ:STRRPA/TP/SP-LAO/57/2024-25 ದಿನಾಂಕ: 28.03.2025.
2. ಅರ್ಜಿದಾರರ ಮನವಿ ದಿನಾಂಕ: 15.04.2025 ಸ್ವೀಕೃತಿ ಸಂಖ್ಯೆ: 113
3. ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ಕೋರಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಪೂರ್ವ ಸಮ್ಮತಿಗಾಗಿ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಗೆ ಕಡತ ಸಲ್ಲಿಸಿದ ದಿನಾಂಕ: 15.05.2025
4. ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಸಮ್ಮತಿ ನೀಡಿದ ದಿನಾಂಕ: 20.05.2025.
5. ಈ ಕಛೇರಿ ಸಮ ಸಂಖ್ಯೆಯ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 26.05.2025.
6. ಅರ್ಜಿದಾರರು ಶುಲ್ಕಗಳನ್ನು ರಶೀದಿ ಸಂಖ್ಯೆ: 6000ರ ದಿನಾಂಕ: 03.06.2025ರಂತೆ ಪಾವತಿಸಿರುತ್ತಾರೆ.

*******************

ಮೆ॥ ಸಪ್ತಗಿರಿ ಶೆಲ್ಟರ್ಸ್ ಇದರ ಮ್ಯಾನೇಜಿಂಗ್ ಪಾರ್ಟನರ್ ಆದ ಶ್ರೀ ಸುಬ್ರಮಣ್ಯ ನಾಯ್ಡು ಮತ್ತು ಶ್ರೀಮತಿ ಎಂ.ಲಾವಣ್ಯ ರವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಮಾನಿದೊಡ್ಡಕೆರೆ ಗ್ರಾಮದ ಸ.ನಂ.129/9ರಲ್ಲಿ 0–27ಗುಂಟೆ ಮತ್ತು 130/1ರಲ್ಲಿ 01ಎಕರೆ–17ಗುಂಟೆ (0–05ಗುಂಟೆ 'ಎ' ಖರಾಬು ಸೇರಿ) ಒಟ್ಟು 02ಎಕರೆ–04ಗುಂಟೆ ವಿಸ್ತೀರ್ಣ ಪ್ರದೇಶದಲ್ಲಿ ಅನುಮೋದನೆಯಾಗಿರುವ ವಸತಿ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಯ ಸ್ವತ್ತಿನ ಸಂಖ್ಯೆ:150300401000900610ರ 8009.37ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ತಳ+ನೆಲ+12 ಅಂತಸ್ತುಗಳು+ಟೆರಸ್ ಒಳಗೊಂಡಂತೆ ವಸತಿ ಉದ್ದೇಶದ ಒಟ್ಟು 166 ಘಟಕಗಳ ಕಟ್ಟಡವನ್ನು ನಿರ್ಮಿಸುವ ಸಂಬಂಧ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿ ಉಲ್ಲೇಖ (2) ರಂತೆ ಅರ್ಜಿ ಸಲ್ಲಿಸಿರುತ್ತಾರೆ.

..2..

13/06/25

ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ234ಬಿಎಂಆರ್2023, ದಿನಾಂಕ: 20/11/2023 ರಂತೆ ಅನುಮೋದನೆಯಾದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಯಮಗಳು 2020 ರಲ್ಲಿನ ನಿಯಮ 18 (5) ರನ್ವಯ ಮತ್ತು ದಿನಾಂಕ: 27/12/2023 & 03/02/2024 ರಂದು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಅಧಿಕೃತ ಜ್ಞಾಪನಾ ಪತ್ರದಲ್ಲಿ ಸೂಚಿಸಿರುವಂತೆ ಸದರಿ ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ಉಲ್ಲೇಖ (3) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರನ್ನು ಪೂರ್ವ ಸಮ್ಮತಿಯನ್ನು ಕೋರಲಾಗಿದ್ದು, ಉಲ್ಲೇಖ (4) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಹಲವು ಷರತ್ತುಗಳಿಗೆ ಒಳಪಟ್ಟು ಕಟ್ಟಡ ನಕ್ಷೆಗೆ ಅನುಮೋದನೆ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಸಮ್ಮತಿ ನೀಡಿರುತ್ತಾರೆ.

ಉಲ್ಲೇಖ (5) ರಲ್ಲಿನ ಈ ಕಛೇರಿ ಪತ್ರದಲ್ಲಿ ಅಗತ್ಯ ಶುಲ್ಕಗಳನ್ನು ಪಾವತಿಸಲು ಹಾಗೂ ವಲಯ ನಿಯಮಾವಳಿಗೆ ಅನುಗುಣವಾಗಿ ಕಟ್ಟಡ ನಕ್ಷೆಯನ್ನು ಅಳತೆಗೆ ತಯಾರಿಸಿ, ನಡುಜಾಗೆಗಳನ್ನು ನಿಯಮಾನುಸಾರ ಕಾಯ್ದಿರಿಸಿ, ಅರ್ಜಿದಾರರ ಹಾಗೂ ಅಭಿಯಂತರರ ಸಹಿಯೊಂದಿಗೆ ಕಟ್ಟಡ ನಕ್ಷೆಯ ಮೂಲ ಪ್ರತಿ ಹಾಗೂ ನೀಲಿ ನಕ್ಷೆಯ ಪ್ರತಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಉಲ್ಲೇಖ (6) ರಲ್ಲಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿ, ಉದ್ದೇಶಿತ ಕಟ್ಟಡಗಳ ಕಟ್ಟಡ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಗಿನ ನಿಬಂಧನೆಗಳೊಂದಿಗೆ ನೀಡಲಾಗಿದೆ.

<u>ನಿಬಂಧನೆಗಳು</u>

1. ಈ ಪ್ರಾಧಿಕಾರದ ವಸತಿ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನಾ ಪತ್ರ ಸಂಖ್ಯೆ:STRRPA/TP/SP-LAO/57/2024-25 ದಿನಾಂಕ: 28.03.2025ರ ಆದೇಶದಲ್ಲಿನ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
2. ಯೋಜಿಸಿರುವ ಕಟ್ಟಡವನ್ನು ವಸತಿ ಉದ್ದೇಶಕ್ಕಾಗಿಯೇ ಉಪಯೋಗಿಸಬೇಕು.
3. ಈ ಪ್ರಾರಂಭಿಕ ಪ್ರಮಾಣ ಪತ್ರವನ್ನು ಎರಡು ವರ್ಷದ ಅವಧಿಗೆ ಅಂದರೆ **<u>ದಿನಾಂಕ: 12.06.2025</u>** ರಿಂದ **<u>11.06.2027</u>** ರವರೆಗೆ ಮಾತ್ರ ನೀಡಲಾಗಿರುತ್ತದೆ.
4. ವಸತಿ ಉಪಯೋಗದ ಕಟ್ಟಡವನ್ನು ನಿರ್ಮಿಸಲು ಪರವಾನಿಗೆಯನ್ನು **ದೊಡ್ಡಗಟ್ಟಿಗನಬ್ಬೆ** ಗ್ರಾಮ ಪಂಚಾಯ್ತಿಯಿಂದ ಪಡೆಯಬೇಕು.
5. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಪ್ರಕಾರ ಇದು ಪ್ರಾರಂಭಿಕ ಪ್ರಮಾಣ ಪತ್ರವಾಗಿದ್ದು, ಈ ಪತ್ರದ ಅಧಾರದ ಮೇಲೆ ಅವಶ್ಯಕ ಇತರೆ ಪರವಾನಿಗೆಯನ್ನು **ದೊಡ್ಡಗಟ್ಟಿಗನಬ್ಬೆ** ಗ್ರಾಮ ಪಂಚಾಯ್ತಿರವರಿಂದ ಪಡೆಯದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದು.
6. ವಸತಿ ಉಪಯೋಗದ ಕಟ್ಟಡವನ್ನು ಹಾಲಿ ಇರುವ ವಲಯ ನಿಯಮಾವಳಿ ಹಾಗೂ ಕಟ್ಟಡದ ವಿಧಿಯ ಪ್ರಕಾರ ನಿರ್ಮಿಸಬೇಕು. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಈ ಪ್ರಾರಂಭಿಕ ಪ್ರಮಾಣ ಪತ್ರದ ಮೂಲಕ ಅನುಮೋದಿಸಿರುವ ನಕ್ಷೆಯಂತೆಯೇ ಕೈಗೊಳ್ಳಬೇಕು. ಬೆಳವಣಿಗೆಯಲ್ಲಿನ ಯಾವುದೇ ಬದಲಾವಣೆಯನ್ನು ಈ ಕಛೇರಿಯ ಪೂರ್ವಾನುಮತಿ ಪಡೆಯದೇ ಮಾಡತಕ್ಕದ್ದಲ್ಲ.
7. ವಸತಿ ಉಪಯೋಗದ ಕಟ್ಟಡ ನಿರ್ಮಿಸಲು ನಕ್ಷೆಯಲ್ಲಿ ಬಿಟ್ಟಿರುವಂತೆ ನಡುಜಾಗವನ್ನು ಬಿಟ್ಟು ಕಟ್ಟಡ ನಿರ್ಮಿಸತಕ್ಕದ್ದು.
8. ವಸತಿ ಉಪಯೋಗದ ಕಟ್ಟಡದ ಮತ್ತು ಯಾವುದೇ ಅಭಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಪ್ರಮಾಣ ಪತ್ರ ಬದ್ಧವಲ್ಲ ಹಾಗೂ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

..3..

13/06/25

9. ವಸತಿ ಉಪಯೋಗದ ಕಟ್ಟಡದ ಭದ್ರತೆಯ ಕುರಿತು ನುರಿತ (Structural Engineer) ತಜ್ಞರಿಂದ Structural Details ಪಡೆದು ಅದರಂತೆ ನಿರ್ವಹಿಸುವುದು ಹಾಗೂ ಅವಶ್ಯಕ ಮುಂಜಾಗ್ರತೆಗಳನ್ನು ಕೈಗೊಳ್ಳತಕ್ಕದ್ದು. ಈ ಕುರಿತು ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ.
10. ಅಗ್ನಿಶಾಮಕ ಇಲಾಖೆ ರವರ ಪತ್ರ ಸಂಖ್ಯೆ: KSFES/NOC/179/2025 Date:08.05.2025ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
11. ಏರ್‌ಪೋರ್ಟ್ ಅಥಾರಿಟಿ ರವರ ಪತ್ರ ಸಂಖ್ಯೆ:BIAL/SOUTH/B/051725/1711871 Date:28.05.2025ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
12. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ನಿ) ರವರ ಪತ್ರ ಸಂಖ್ಯೆ: EEE/HKTD/AEE(O)/AE-1/ 2025-26/575 Date:22.04.2025ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
13. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ರವರ ಪತ್ರ ಸಂಖ್ಯೆ: CTE-348656 PCB Id: 278939 ದಿನಾಂಕ: 09.05.2025ರಂದು ನೀಡಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.
14. ಅರ್ಜಿದಾರರು State Level Environment Impact Assessment Authority-Karnataka ರವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ಮನವಿ ಪತ್ರ ಸಲ್ಲಿಸಿದ್ದು, ಅದರಂತೆ ಈ ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ದಿನಾಂಕದಿಂದ 90 ದಿವಸಗಳೊಳಗಾಗಿ ಸದರಿ ನಿರಾಕ್ಷೇಪಣಾ ಪತ್ರವನ್ನು ಪಡೆದು ಈ ಪ್ರಾಧಿಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
15. ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.
16. ಕಾಮಗಾರಿಗಳಿಂದಾಗಿ ಪರಿಸರವು ಮಾಲಿನ್ಯವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಮತ್ತು ಸ್ವಾಭಾವಿಕ ಮಳೆಯ ನೀರು ಇಂಗಿ ಹೋಗಲು ವ್ಯವಸ್ಥೆ (Rain Water harvesting) ಯನ್ನು ಮಾಡತಕ್ಕದ್ದು ಮತ್ತು ಸೌರಶಕ್ತಿ ವ್ಯವಸ್ಥೆಯನ್ನು ಕಟ್ಟಡದಲ್ಲಿ ಒದಗಿಸತಕ್ಕದ್ದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ನಿವೇಶನದ ಮುಂಭಾಗದಲ್ಲಿ ಗಿಡ/ಮರವನ್ನು ಬೆಳೆಸತಕ್ಕದ್ದು.
17. ಈ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.
18. ಈ ಪ್ರಾರಂಭಿಕ ಪ್ರಮಾಣ ಪತ್ರದೊಡನೆ ಅನುಮೋದಿಸಲ್ಪಟ್ಟಿರುವ ನಕ್ಷೆಯು ಕಟ್ಟಡದ ನಿರ್ಮಾಣ ಸ್ಥಳದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.
19. ಪ್ರಶ್ನಿತ ನಿವೇಶನದಲ್ಲಿ ಉದ್ದೇಶಿಸಿರುವ ವಸತಿ ಉಪಯೋಗದ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಾಲ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದು.
20. ಈ ಪ್ರಾಧಿಕಾರದ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಸಂಪರ್ಕ ರಸ್ತೆಯ ಬಗ್ಗೆ ಯಾವುದೇ ತಕರಾರು ಬಂದರೂ ಈ ಪ್ರಾಧಿಕಾರವು ಹೊಣೆಯಲ್ಲ ಮತ್ತು ನೀವೇ ಸ್ವಂತ ಜವಾಬ್ದಾರಿಯಿಂದ ಬಗೆಹರಿಸಿಕೊಳ್ಳತಕ್ಕದ್ದು.

..4..

13/06/25

21. ಈ ಅನುಮತಿಯನ್ನು ಉಲ್ಲಂಘಿಸಿ ಅಭಿವೃದ್ಧಿಯನ್ನು ಕೈಗೊಂಡರೆ ಅಥವಾ ನೀಡಿರುವ ಮಾಹಿತಿಗಳು ದೋಷ ಪೂರ್ಣವಾಗಿದ್ದರೆ ಅನುಮತಿಯನ್ನು ಹಿಂತೆಗೆದುಕೊಳ್ಳಲಾಗುವುದಲ್ಲದೇ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅನ್ವಯ ಕ್ರಮ ತೆಗೆದುಕೊಳ್ಳಲಾಗುಪವುದು.
22. ವಸತಿ ಉಪಯೋಗದ ಕಟ್ಟಡ ಅನುಮೋದನೆ ಸಂಬಂಧ ಇತರೆ ಇಲಾಖೆಗಳಿಂದ ಅಗತ್ಯವಿರುವ ಅನುಮತಿ/ನಿರಾಕ್ಷೇಪಣಾ ಪತ್ರಗಳನ್ನು ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.
23. ಅಧಿಕ ವಿದ್ಯುತ್ ತಂತಿ/ನಾಲಾ ಪಂಕ್ತಿಕರಣಗಳಿದ್ದಲ್ಲಿ ಅಗತ್ಯ ಬಫರ್ ಕಾಯ್ದಿರಿಸತಕ್ಕದ್ದು.
24. ತಹಶೀಲ್ದಾರ್ ರವರ ಕಾರ್ಯಾಲಯ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ:THHSK-LNDOLNDK/35/2025 ದಿನಾಂಕ:05.06.2025ರ ಪತ್ರದಲ್ಲಿ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಅಮಾನಿದೊಡ್ಡಕೆರೆ ಗ್ರಾಮದ ಸ.ನಂ.130/1ರ ಪಕ್ಕದಲ್ಲಿ ಹಾದುಹೋಗಿರುವ ಹದ್ದಿಗಿಡದ ಹಳ್ಳದ ಮೇಲೆ ಸೇತುವೆ ನಿರ್ಮಾಣ ಮಾಡಲು ಅನುಮತಿ ನೀಡಲಾಗಿದ್ದು, ಸದರಿ ಅನುಮತಿ ಪತ್ರದಲ್ಲಿ ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.
25. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಗಳಾಗಿದ್ದರೆ ಈ ಕಛೇರಿಯಿಂದ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

(ಟಿಪ್ಪಣಿ ಸದಸ್ಯ ಕಾರ್ಯದರ್ಶಿಯವರಿಂದ
ಅನುಮೋದಿಸಲ್ಪಟ್ಟಿದೆ)

13/06/25

ಸದಸ್ಯ ಕಾರ್ಯದರ್ಶಿಗಳ ಪರವಾಗಿ
ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

ಇವರಿಗೆ,
ಮೆ॥ ಸಪ್ತಗಿರಿ ಶೆಲ್ಟರ್ಸ್ ಇದರ ಮ್ಯಾನೇಜಿಂಗ್ ಪಾರ್ಟ್‌ನರ್ ಆದ
ಶ್ರೀ ಸುಬ್ರಮಣ್ಯ ನಾಯ್ಡು ಮತ್ತು ಶ್ರೀಮತಿ ಎಂ.ಲಾವಣ್ಯ,
ನಂ.48, ಕೊಡಿಗೇಹಳ್ಳಿ ಮುಖ್ಯರಸ್ತೆ, ಅಯ್ಯಪ್ಪ ನಗರ್,
ಕೆ.ಆರ್ ಪುರಂ, ಬೆಂಗಳೂರು-560 036.